ಬೈಂದೂರು ಪುರಸಭೆಗೆ ಸುರಕ್ಷಿತ ನಲ್ಲಿ ನೀರು ಸರಬರಾಜಿನ ಬಗ್ಗೆ.

೨೨೫ ಶ್ರೀ ಜಿ.ಎಸ್. ಆಚಾರ್(ಬೈಂದೂರು).—ಮಾನ್ಯ ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭ನೇ ವರ್ಷದಲ್ಲಿ ಬೈಂದೂರು ಪುರಸಭಾ ವಲಯಕ್ಕೆ ಸುರಕ್ಷಿತ ನಳದ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ಮಾನ್ಯ ಸಚಿವರು ಕಳೆದ ವಿಧಾನ ಸಭಾಧಿವೇಶನದಲ್ಲಿ ಭರವಸೆ ಇತ್ತಿದ್ದರೂ ಈ ತನಕ ಆ ಯೋಜನೆ ಮಂಜೂರಾಗಿ ಕಾರ್ಯಾರಂಭವಾಗದಿರಲು ಕಾರಣವೇನು;

ಆ) ಅದನ್ನು ಯಾವಾಗ ಕಾರ್ಯಾರಂಭ ಮಾಡಲಾಗುವುದು ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೪೦ ೦೦ ಲಕ್ಷ ರೂ.ಗಳ ಅಂದಾಜು ವೆಚ್ಚದ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಆಡಳಿತಾತ್ಮಕ ಮಂಜೂರಾತಿ ನೀಡಿದ ನಂತರ ಕಾರ್ಯಾರಂಭ ಮಾಡಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಕಳೆದ ಅಧಿವೇಶನದ ಸಮಯದಲ್ಲೇ ಮಾನ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು. ೧೯೮೬-೮೭ನೇ ಸಾಲಿನಲ್ಲಿ ಈ ಕೆಲಸವನ್ನು ಕೈಗೊಳ್ಳುತ್ತೇವೆ ಅಂತ. ಆದ್ದರಿಂದ ಆದಷ್ಟು ಬೇಗ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಈ ವರ್ಷವೇ ಕಾರ್ಯಾರಂಭ ಮಾಡಲಾಗುವುದೇ ಅಂತ ಒಂದು. ಎರಡನೆಯದಾಗಿ ಅಲ್ಲಿನ ಪುರಸಭೆಗೆ ಇತ್ತೀಚೆಗೆ ಒಂದು ಪತ್ರ "ಕರ್ನಾಟಕ ನಗರ ಪ್ರದೇಶ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಲಿಯಿಂದ" ಬಂದಿದೆ. ೩೮ ಲಕ್ಷ ರೂಪಾಯಿಗಳ ಅನುದಾನವನ್ನು ಪುರಸಭೆಗೆ ಜೇರಾಗಿ ಕೊಡಬೇಕೆಂದು ಸೂಚನೆ ಬಂದಿದೆ. ಇದರಲ್ಲಿ ಅವಶ್ಯಕತೆ ಇದೆಯೇ ಚಿಕ್ಕಪುರಸಭೆಗಳಿಗೆ ಹಿಂದೆ ನೀಡಿದಂತಹ ರಿಯಾಯಿತಿಯನ್ನು ಈಗ ವಾಪಸ್ಸು ತೆಗೆದುಕೊಂಡಿದ್ದೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣವನ್ನು ಕೇಳಿದರ ಬಗ್ಗೆ ನಾನು ವಿಚಾರಣೆ ಮಾಡಿ, ಸರಿಯಾದ ನಿರ್ಣಯವನ್ನು ಕೊಡುತ್ತೇನೆ. ಎರಡನೆಯದಾಗಿ ಮಾನ್ಯ ಸದಸ್ಯರು ತಡವಾಗಿದೆ ಅಂತ ಹೇಳಿದರು ತಡವಾಗುವುದಕ್ಕೆ ಕಾರಣ ೧೧.೫ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ, ಕೊಳಾಯಿ ನೀರನ್ನು ಸರಬರಾಜು ಮಾಡಬೇಕೆಂದು ೧೯೮೫ರಲ್ಲಿ ಆದಕ್ಕೆ ಒಪ್ಪಿಗೆ ಕೊಟ್ಟಿತ್ತು. ಆದರೆ ಇದಷ್ಟು ಆ ಊರಿನ ಜನ ತೆರೆದ ಬಾವಿಗಳಿಂದ ನೀರನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು. ನಮಗೆ ಕೊಳವೆ ಬಾವಿಗಳ ನೀರು ಬೇಕಾಗಿಲ್ಲ ಎಂಬುದಾಗಿ ಹೇಳಿದರು ಬಹುಶಃ ಉಪ್ಪು ನೀರು ಬರುತ್ತಿದೆ ಎನ್ನುವ ಕಾರಣಕ್ಕೋಸ್ಕರ ಅಂತ ಇರಬಹುದು. ಆದ್ದರಿಂದ ಆ ಅಂದಾಜನ್ನು ರೀ-ಕ್ಯಾಸ್ಟ್ ಮಾಡಿದಾಗ ೨೧ ಲಕ್ಷ ರೂಪಾಯಿಗಳ ಅಂದಾಜಾಯಿತು. ಆ ಕಾರಣಕ್ಕೋಸ್ಕರ ಸ್ವಲ್ಪ ತಡವಾಗಿದೆ. ಬೇರೆ ಇದನ್ನು ಕ್ರಮ ಕೈಗೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ.

ಶಹಾಪುರ ತಾಲ್ಲೂಕಿನಲ್ಲಿ ನಿವೇಶನಗಳನ್ನು ಹಂಚುವ ಬಗ್ಗೆ.

೩೨೫. ಶ್ರೀ ಶಿವಶೇಖರಪ್ಪಗೌಡ ಶಿರವಾಳ.—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನಲ್ಲಿ ನಿವೇಶನಗಳಿಗಾಗಿ ಸರ್ಕಾರದವರು ವಶಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಆ) ಈ ಜಮೀನಿನಲ್ಲಿ ಎಷ್ಟು ನಿವೇಶನಗಳನ್ನು ರಚಿಸಲಾಗಿದೆ.

ಇ) ಸದರಿ ನಿವೇಶನಗಳಲ್ಲಿ ಎಷ್ಟು ನಿವೇಶನಗಳನ್ನು ಜನರಿಗೆ ಹಂಚಲಾಗಿದೆ.

ಈ) ಹಂಚಲು ಬಾಕಿ ಉಳಿದಿರುವ ನಿವೇಶನಗಳೆಷ್ಟು ?

ಉ) ಈ ನಿವೇಶನಗಳನ್ನು ಯಾವಾಗ ಹಂಚಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಸಚಿವರು).—

ಅ) ನಗರ ಪ್ರದೇಶದಲ್ಲಿ (೧) ೫ ಎಕರೆ ೩೦ ಗುಂಟೆ
ಗ್ರಾಮಾಂತರ ಪ್ರದೇಶದಲ್ಲಿ (೨) ೨೪೦ ಎಕರೆ

ಆ) ನಗರ ಪ್ರದೇಶದಲ್ಲಿ ೧೦೪ ನಿವೇಶನಗಳು
ಗ್ರಾಮಾಂತರ ಪ್ರದೇಶದಲ್ಲಿ ೫೨೫೧೦ ನಿವೇಶನಗಳು

ಇ) ನಗರ ಪ್ರದೇಶ ೧೦೪
ಗ್ರಾಮಾಂತರ ಪ್ರದೇಶ ೫೨೫೧೦
(ಸರ್ಕಾರಿ ಜಮೀನಿನಲ್ಲಿ ೯೮೨ ನಿವೇಶನಗಳು)

ಈ) ನಗರ ಪ್ರದೇಶ ೩೩೯
ಗ್ರಾಮಾಂತರ ಪ್ರದೇಶ ೧೭೯

ಉ) ನಗರ ಪ್ರದೇಶದಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಭೂಮಿಯನ್ನು ಭೂಸ್ವಾಧೀನ ಮಾಡಿಕೊಂಡು ನಂತರ ಉಳಿದ ನಿವೇಶನಗಳನ್ನು ಹಂಚಲಾಗುವುದು.

೩೨೫ ಮೂರನೇ ಪಟ್ಟಿಯಿಂದ ಮುಂದೂಡಲಾದ ಪ್ರಶ್ನೆಗಳು
ಪ್ರಶ್ನೆ (42)325

ಶ್ರೀ ಶಿವಶಂಕರಪ್ಪ ಗೌಡ ಶಿರ್ವಾಲ್.—ನಾನು ಈ ಪ್ರಶ್ನೆಯನ್ನು ಕೇಳಿರತಕ್ಕಂತಹ ಉದ್ದೇಶ ವೇನೆಂದರೆ, ಇತ್ತೀಚೆಗೆ ಸರ್ಕಾರ ಸಾಕಷ್ಟು ಕಡೆಗಳಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದರೂ ಸುಮಾರು ೪-೫ ವರ್ಷಗಳಿಂದ ಬಹಳಷ್ಟು ಕಡೆ ನಿವೇಶನ ಇಲ್ಲದವರಿಗೆ ನಿವೇಶನಗಳನ್ನು ಕೊಟ್ಟಿಲ್ಲ. ಅದ್ದರಿಂದ ಸರ್ಕಾರ ಇದರ ಬಗ್ಗೆ ಕೂಡಲೇ ಯೋಚನೆ ಮಾಡಿ ಎಲ್ಲ ಕಡೆ ನಿವೇಶನಗಳನ್ನು ಹಂಚುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನನಗೆ ಬಂದಿರತಕ್ಕಂತಹ ಅಂಕಿ ಅಂಶಗಳ ಪ್ರಕಾರ ಎಲ್ಲ ಕಡೆ ಸರ್ವೇ ಮಾಡಲಾಗಿದ್ದು, ಅದರ ಪ್ರಕಾರ ನಿವೇಶನ ರಹಿತ ಜನರು ೬,೪೧೨ ಎಂಬುದಾಗಿ ಮಾಡಿದ್ದಾರೆ. ಅದರ ಪ್ರಕಾರ ೬.೨೬ ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಂಡಿದ್ದು, ಈಗಾಗಲೇ ಬಹಳಷ್ಟು ಜನರಿಗೆ ನಿವೇಶನಗಳನ್ನು ಹಂಚಲಾಗಿದ್ದು, ಇನ್ನು ಕೇವಲ ೧೭೪ ಜನರಿಗೆ ಮಾತ್ರ ನಿವೇಶನಗಳನ್ನು ಕೊಡಬೇಕಾಗಿದೆ. ಪುನಃ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಆ ಜನರಿಗೆ ನಿವೇಶನಗಳನ್ನು ಹಂಚಲು ಪ್ರಯತ್ನ ಮಾಡುತ್ತೇವೆ. ಇದರ ಜೊತೆಗೆ ಇನ್ನೊಂದು ಆಜ್ಞೆಯನ್ನು ಸರ್ಕಾರ ಮಾಡಿದೆ. ಈ ಹಿಂದೆ ಏನಂ ನಿವೇಶನ ರಹಿತ ಜನರೆಂದು ಗುರುತು ಮಾಡಿದ್ದೇವೆ. ಅವರಿಗೆ ನಿವೇಶನಗಳನ್ನು ಕೊಡುವುದರ ಜೊತೆಗೆ ಹೊಸದಾಗಿ ಯಾರ್ಯಾರು ನಿವೇಶನ ರಹಿತ ಜನರು ಇದ್ದಾರೆ, ಎಂಬುದರ ಮಾಹಿತಿಯನ್ನು ತಯಾರು ಮಾಡಿ ಅವರಿಗೂ ನಿವೇಶನಗಳನ್ನು ಕೊಡಿ ಎಂಬುದಾಗಿ ಹೇಳಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಈ ಮೂರು ವರ್ಷಗಳಲ್ಲಿ ಗುರುತಿಸಿ ಮಾಡಿದವರಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳಿ. ಅಂದರೆ ೧೯೮೩-೮೪, ೧೯೮೪—೮೫ ಮತ್ತು ೧೯೮೫-೮೬ನೇ ವರ್ಷಗಳದು ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೭೬ರಲ್ಲಿ ಮಾತ್ರ ನಿವೇಶನ ರಹಿತ ಜನರು ಎಷ್ಟು ಇದ್ದಾರೆಂಬುದನ್ನು ಗುರುತು ಮಾಡಿದ್ದು. ಪ್ರತಿ ವರ್ಷ ಯಾರ್ಯಾರು ನಿವೇಶನ ರಹಿತ ಜನರು ಇದ್ದಾರೆ ಎಂಬುದನ್ನು ಗುರುತು ಮಾಡುವುದಕ್ಕಾಗುವುದಿಲ್ಲ. ಅವರೂ ಕೂಡ ಈ ಖಾತೆಯ ಮಂತ್ರಿಗಳಾಗಿದ್ದಂತಹವರು (ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆಯವರನ್ನು ಕುರಿತು) ೧೯೭೬ರಲ್ಲಿ ಗುರುತು ಮಾಡಿರುವ ಪ್ರಕಾರ ೧೪ ಲಕ್ಷ ಜನರು ನಿವೇಶನ ರಹಿತ ಜನರು ಇದ್ದಾರೆಂದು ಗುರುತು ಮಾಡಲಾಗಿದೆ. ಆದರಲ್ಲಿ ಇನ್ನು ಕೇವಲ ೧ ಲಕ್ಷ ೨೦ ಸಾವಿರ ಜನರಿಗೆ ಮಾತ್ರ ನಿವೇಶನಗಳನ್ನು ಕೊಡಬೇಕಾಗಿರುತ್ತದೆ. ಅದನ್ನು ಪ್ರತಿ ವರ್ಷ ಗುರುತು ಮಾಡುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ—ಈ ಎರಡು ವರ್ಷಗಳಲ್ಲಿ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ? ಎಂಬುದನ್ನು ಹೇಳಿ. ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಪ್ರಶ್ನೆಯನ್ನು ಕೇಳಿದ್ದಾರೆ. ಶಹಾಪುರದಲ್ಲಿ ಈ ವರ್ಷ ಎಷ್ಟು ನಿವೇಶನಗಳನ್ನು ಹಂಚಿದ್ದೀರಿ ಎಂಬುದನ್ನು ಕೇಳಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮೂಲ ಪ್ರಶ್ನೆಯೇ ಬೇರೆ ಇದೆ. ಉಪ ಪ್ರಶ್ನೆಯೇ ಬೇರೆ ಇದೆ

ಶ್ರೀ ಧರ್ಮಸಿಂಗ್.—೧೯೭೬ರಲ್ಲಿ ೧೪ ಲಕ್ಷ ನಿವೇಶನ ರಹಿತ ಜನರು ಇದ್ದಾರೆ ಎಂಬುದಾಗಿ ಕೇಳಿದ್ದೇವೆ. ಆದರೆ ಆ ೧೪ ಲಕ್ಷ ಜನರ ಪೈಕಿ ೧೯೮೫ರಿಂದೀಚೆಗೆ ಎಷ್ಟು ಜನರಿಗೆ ನಿವೇಶನಗಳನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ಆ ಬಗ್ಗೆ ಅಂಕಿ ಅಂಶಗಳು ನನ್ನ ಹತ್ತಿರ ಇಲ್ಲ. ೧೯೭೬ರಲ್ಲಿ ಸರ್ವೇ ಮಾಡಿದ ಪ್ರಕಾರ ೧೪ ಲಕ್ಷ ನಿವೇಶನ ರಹಿತ ಜನರು ಈ ರಾಜ್ಯದಲ್ಲಿ ಇದ್ದಾರೆಂಬುದು ತಿಳಿಯುತ್ತದೆ ಆದರೆ ಈವರೆಗೆ ಎಷ್ಟು ಜನರಿಗೆ ಸೈಟುಗಳನ್ನು ಕೊಡಲಾಗಿದೆ ಎಂಬುದರ ಬಗ್ಗೆ ಮಾಹಿತಿ ನನ್ನ ಹತ್ತಿರ ಇಲ್ಲ. ಮಾನ್ಯ ಖರ್ಗೆಯವರ ರೀತಿಯಲ್ಲಿ ನಾನೂ ಬದಲಾಯಿಸಿಕೊಂಡು ಮಾತನಾಡುವುದಕ್ಕಾಗುವುದಿಲ್ಲ. ನಿವೇಶನ ರಹಿತ ಜನರು ಎಷ್ಟು ಇದ್ದಾರೆ ಎಂಬುದನ್ನು ಪ್ರತಿವರ್ಷ ಗುರುತು ಮಾಡುವುದಕ್ಕಾಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪ್ರತಿ ವರ್ಷ ಇಂತಿಷ್ಟು ನಿವೇಶನಗಳನ್ನು ನಿವೇಶನ ರಹಿತ ಜನರಿಗೆ ಕೊಡಬೇಕೆಂಬುದರ ಬಗ್ಗೆ ಟಾರ್ಗೆಟ್ ಇರುತ್ತದೆ. ೨ ಸಾವಿರ ಅಂತಲೋ, ೩ ಸಾವಿರ ಅಂತಲೋ ಇರುತ್ತದೆ. ಆ ಪ್ರಕಾರ ಈ ಎರಡು ವರ್ಷಗಳಲ್ಲಿ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ಎಂಬುದನ್ನು ಹೇಳುವುದಕ್ಕಾಗುವುದಿಲ್ಲವೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಪ್ರತಿ ವರ್ಷ ನಿವೇಶನ ರಹಿತ ಜನರು ಎಷ್ಟು ಇದ್ದಾರೆಂಬುದನ್ನು ಗುರುತು ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದನ್ನು ಜ್ಞಾಪಿಸುತ್ತಿದ್ದೇನೆ. ಹೊಸದಾಗಿ ಐಡೆಂಟಿಫೈ ಮಾಡುವುದಕ್ಕೆ ಆದೇಶ ಕೊಟ್ಟಿಲ್ಲ.

ಅಧ್ಯಕ್ಷರು.—೨೦ ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಹಾಗೆ ಪ್ರತಿ ಜಿಲ್ಲೆಯಲ್ಲಿ, ತಾಲ್ಲೂಕಿನಲ್ಲಿ ಮೀಟಿಂಗ್ ಕರೆಯುತ್ತಾರೆ. ಆಗ ಅಲ್ಲಿ ಕೇಳಿದರೆ ಅಂಕಿ ಸಂಖ್ಯೆಗಳನ್ನು ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲಿಯೂ ಸಹ ಪ್ರಶ್ನೆ ಕೇಳುವುದಕ್ಕೆ ನಮಗೆ ಹಕ್ಕಿದೆ. ಜಿಲ್ಲೆಯಲ್ಲಿ ಈ ಪ್ರಶ್ನೆ ಬಂದಾಗ ಅಲ್ಲಿಯೂ ಕೇಳುತ್ತೇವೆ. ಜಿಲ್ಲಾ ಮಟ್ಟದಲ್ಲಿ ಕೇಳುವುದನ್ನು ಜಿಲ್ಲಾ ಮಟ್ಟದಲ್ಲಿ ಕೇಳುತ್ತೇವೆ, ತಾಲ್ಲೂಕು ಮಟ್ಟದಲ್ಲಿ ಕೇಳುವುದನ್ನು ತಾಲ್ಲೂಕು ಮಟ್ಟದಲ್ಲಿ ಕೇಳುತ್ತೇವೆ. ಇಲ್ಲಿ ಕೇಳಿದ್ದಕ್ಕೆ ಇಲ್ಲಿ ಉತ್ತರಿಸಬೇಕಾಗುತ್ತದೆ. ಐಡೆಂಟಿಫೈ ಮಾಡಿದ್ದೀರಿ. ೧೪ ಲಕ್ಷವನ್ನು ಈಗಾಗಲೇ ಕೊಟ್ಟಿದ್ದೀರಿ. ಎರಡು ವರ್ಷದಲ್ಲಿ ಆ ತಾಲ್ಲೂಕಿನ ಬಿಡಿಒ. ಅವರು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ, ಯೂಸ್‌ಲೆಸ್ ಪೀಪಲ್ ಎಂದು ಯಾರನ್ನು ಹೇಳುತ್ತೀರಿ ಅವರಿಂದಲೇ ಗೆದ್ದು ನೀವು ಮಂತ್ರಿಯಾಗಿದ್ದೀರಿ. ನೀವು ಕೆಲಸ ಮಾಡಿದ್ದು ಗೊತ್ತು. ಎರಡು ವರ್ಷದಲ್ಲಿ ಬಿಡಿಒ. ಮಾಡಿದ್ದು ಗೊತ್ತು. ಆ ತಾಲ್ಲೂಕಿನಲ್ಲಿ ಎಷ್ಟು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಆ ಪ್ರಶ್ನೆಯನ್ನು ಅವರೂ ಕೇಳಲಿ.

ಶ್ರೀ ಧರ್ಮಸಿಂಗ್.—ಕೇಳಿದ್ದೇನೆ. ೧೯೭೬ರಲ್ಲಿ ೧೪ ಲಕ್ಷ ಜನರಿಗೆ ನಿವೇಶನ ಕೊಡತಕ್ಕದ್ದೂ ಐಡೆಂಟಿಫೈ ಆಗಿದೆ ಎಂದು ಹೇಳಿದ್ದೀರಿ. ನನಗೆ ಗೊತ್ತಿದ್ದ ಹಾಗೆ ೧೧.೪೯ ಸಾವಿರ ನಿವೇಶನಗಳು ೧೯೮೫ಕ್ಕಿಂತ ಮುಂಚೆ ಹಂಚಿದ್ದೇವೆ. ೧೯೮೫ರಿಂದ ಮುಖ್ಯ ಮಂತ್ರಿಗಳು ಪದೇ ಪದೇ ನಿವೇಶನ ಸಂಚಾರವಾದರಲ್ಲಿ ಕರ್ನಾಟಕ ರಾಜ್ಯ ಪ್ರಥಮ ಸ್ಥಾನವನ್ನು ಪಡೆದಿದೆ ಎಂದೂ ಹೇಳುತ್ತಿದ್ದಾರೆ. ೧೯೮೫ರಿಂದ ಇಲ್ಲಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಬಡಜನರಿಗೆ ಎಷ್ಟು ನಿವೇಶನಗಳನ್ನು ಹಂಚಿದ್ದಾರೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅದಕ್ಕೆ ನೋಟೀಸ್ ಬೇಕು.

(ಮುಂದಿದೆ)

ಅಧ್ಯಕ್ಷರು.—ಬಿಟ್ಟು ಕೊಡಿ. ನೀವು ಏನು ಮಾತನಾಡಿದರೂ ಅದು ರೆಕಾರ್ಡಿಗೆ ಹೋಗುವುದಿಲ್ಲ. ನೋಟೀಸ್ ಬೇಕು ಎಂದರೆ ಬೇಕು, ಕೊಡಿ.

ಶ್ರೀ ಜಿ. ಎಸ್. ಆಚಾರ್. ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಪ್ರಕಾರ ಕಡಿಮೆ ರೇಟ್‌ನಲ್ಲಿ ಒಂದು ಎಕರೆ ಲ್ಯಾಂಡನ್ನು ಅಕ್ವಿಜಿಷನ್ ಮಾಡಿಕೊಳ್ಳುವಾಗ ೫೦೦ ಅಥವಾ ಸಾವಿರ ರೂಪಾಯಿ ಕೊಡುತ್ತಾರೆ. ಜಾಸ್ತಿ ರೇಟ್ ಕೊಟ್ಟರೆ ಮುಂದೆ ಹೈಕೋರ್ಟ್ ಮಂತ್ರೊಂದರ ಕೋರ್ಟ್‌ಗೆ ಹೋಗಿ ಸ್ಟೇ ತರುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಸರಿಯಾದ ರೀತಿಯಲ್ಲಿ ಹಣವನ್ನು ಒದಗಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ನನಗೆ ಗೊತ್ತಿದೆ. ಬಹಳ ಕಡೆ ಅಕ್ವೈರ್ ಮಾಡಿಕೊಳ್ಳುವಾಗ ಕಡಿಮೆ ಬೆಲೆ ಕೊಡುತ್ತಿದ್ದಾರೆಂದು ದೂರು ಬಂದಿದೆ. ಅದು ನೀತಿಯ ವಿಚಾರ. ಅದನ್ನು ಪರಿಶೀಲಿಸುತ್ತೇವೆ.

ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನಿವೇಶನಗಳನ್ನು ಹಂಚುವ ಬಗ್ಗೆ.

೩೨೩. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ). ಮಾನ್ಯ ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧. ಸರ್ಕಾರದವರು ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ನಿವೇಶನ ರಚಿಸಲು ಅನುಮತಿ ಕೊಟ್ಟಿದೆ?

೨. ನಿಗಧಿತವಾದ ಸರ್ಕಾರದ ಅನುಮತಿಯಿಲ್ಲದೆ ಕೆಲವಿಸಂಸ್ಥೆ ನಿವೇಶನ ಮಾಲೀಕರಿಂದ ನಿವೇಶನವನ್ನು ಮಾಡಲಾಗಿದೆಯೇ?

೩. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ರಚಿಸಿರುವ ಬಗ್ಗೆ?

೪. ಭೂಸ್ವಾಧೀನತೆಯಲ್ಲಿರುವ ಈಗಿನ ಭೂಮಿಯು ನಿಸ್ತೀರ್ಣ?

ಅ. ಸರ್ಕಾರವು ಗೃಹನಿರ್ಮಾಣ ಸಂಘಗಳಿಗೆ ಅನುಮತಿ ನೀಡಿರುವ ಬಗ್ಗೆ?

ಆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪಡಿಯಲ್ಲಿ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೧. ೧೯೮೩ರಿಂದ ೨೮ ಗೃಹ ನಿರ್ಮಾಣ ಸಂಘಗಳಿಗೆ ಸುಮಾರು ೮೭೧೬ ನಿವೇಶನಗಳನ್ನು ರಚಿಸಲು ಅನುಮತಿ ನೀಡಿದೆ.

೨. ವಿವರವಾದ ಸರ್ವೆ ಕೆಲಸವನ್ನು ತೆಗೆದುಕೊಂಡು ಅದು ಮುಂದುವರಿಯುತ್ತಿದೆ.

೩. ೪೧೨೫೫ ನಿವೇಶನಗಳನ್ನು ರಚಿಸಿದೆ.

೪. ಅ. ೮, ೮೩೧ ಎಕರೆ ೨೧೪ ಗುಂಟೆ.

ಆ. ೯, ೬೫೩ ಎಕರೆ ೨೪ ಗುಂಟೆ (ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಯೋಜನೆ ವ್ಯಾಪ್ತಿಗೆ).

ಶ್ರೀ ಬಿ. ಬಸವಲಿಂಗಪ್ಪ.—ಇವರ ಉತ್ತರ ಸಮರ್ಪಕವಾಗಿಲ್ಲ. ಮೊದಲನೇ ಪ್ರಶ್ನೆಗೆ ೧೯೮೩ರಿಂದ ೨೮ ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ೮೭೧೬ ನಿವೇಶನ ರಚಿಸಲು ಅನುಮತಿ ಕೊಡಲಾಗಿದೆ ಎಂದು ಹೇಳಿದ್ದಾರೆ. ೧೯೮೩ಕ್ಕಿಂತ ಹಿಂದೆ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಪರವಾನಗಿ ಕೊಟ್ಟಿದ್ದೀರಿ? ಸರ್ಕಾರದ ಅನುಮತಿ ಇಲ್ಲದೆ ಅವರು ಎಷ್ಟು ನಿವೇಶನಗಳನ್ನು ಮಾಡಿದ್ದಾರೆ? ಮತ್ತು ಅನುಮತಿ ಮೇಲೆ ಎಷ್ಟು ಮಾಡಿದ್ದಾರೆ?

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದೆ ಎಷ್ಟು ಕೊಟ್ಟರು ಎಂದರೆ ಆಗ ನಾವು ಅಧಿಕಾರದಲ್ಲಿ ಇರಲಿಲ್ಲ. ೧೯೮೩ಕ್ಕಿಂತ ಹಿಂದೆ ಎಷ್ಟು ಸೊಸೈಟಿಗಳಿಗೆ ಕೊಟ್ಟಿದ್ದೀರಿ ಎಂಬುದಕ್ಕೆ ಮಾಹಿತಿ ಈಗ ನನ್ನ ಪತ್ತಿರ ಇಲ್ಲ. ಬೇಕಾದರೆ ವಿವರವನ್ನು ಸಂಗ್ರಹಿಸಿಕೊಡುತ್ತೇನೆ.